# ಪಠ್ಯಕ್ರಮ ಮಧ್ಯಪ್ರವೇಶದ ಮೂಲಕ ಸಾಮಾಜಿಕ ಅಂತರದ ನಿವಾರಣೆ

ಶುಭ್ರಾ ಚಟರ್ಜಿ

ಕೋಲ್ಕತ್ತಾ ನಗರದ ನೈರುತ್ಯ ಅಂಚಿನಲ್ಲಿ ಸ್ಥಾಪಿತವಾಗಿರುವ ಶಾಲೆಗಳ ಒಂದು ಸಮೂಹದ ಜೊತೆ ಮಾಡಿದ ಕೆಲಸದ ಉದಾಹರಣೆಯನ್ನು ವಿವರಿಸುವ ಮೂಲಕ ನಾನು ಈ ಲೇಖನವನ್ನು ಪ್ರಾರಂಭಿಸುತ್ತೇನೆ. ಆ ಶಾಲೆಗಳ ನೆರೆಹೊರೆಯಲ್ಲಿ ಗಾಳಿಪಟ ತಯಾರಿ, ಝರಿ ಕುಸುರಿ, ಕಸೂತಿ ಇತ್ಯಾದಿ ಅನೌಪಚಾರಿಕ ಆರ್ಥಿಕತೆಯು ಬಲವಾಗಿ ಬೇರೂರಿದ್ದು, ಸಾಮಾನ್ಯವಾಗಿ ಮಕ್ಕಳೂ ತಮ್ಮ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಳ್ಳಲು ಅವರೊಂದಿಗೆ ತೊಡಗಿಕೊಂಡಿರುವುದನ್ನು ಕಾಣಬಹುದು. ದೈನಂದಿನ ಜೀವನ ನಿರ್ವಹಣೆಗೆ ಎದುರಿಸುವ ಕಷ್ಟಗಳನ್ನು ನೋಡಿದರೆ, ಆ ಕುಟುಂಬಗಳಿಗೆ ಶಿಕ್ಷಣ ಕೊನೆಯ ಆದ್ಯತೆಯಾಗಿ ಇರುವುದು ಕಾಣುತ್ತದೆ. ಮಕ್ಕಳು ಶಾಲೆಗೆ ಹಾಜರಾಗುವುದಕ್ಕೂ ಇಷ್ಟಪಡುವುದಿಲ್ಲ. ಅಲ್ಲಿ ಅವರಿಗೆ ಸರಿಯಾಗಿ ಹೊಂದಾಣಿಕೆಯೂ ಆಗುವುದಿಲ್ಲ.

## ಕಲಿಕಾ ವಾತಾವರಣವನ್ನು ಸೃಷ್ಟಿಸುವುದು

### ಶಿಕ್ಷಕರ ವಿಧಾನ

ಪ್ರತಿ ಮಗುವೂ ಕಲಿಕೆಯ ಅವಕಾಶಗಳಿಂದ ಪ್ರಯೋಜನ ಪಡೆದುಕೊಳ್ಳಬೇಕೆಂದು ನಾವು ಬಯಸುವುದಾದರೆ, ಪ್ರೋತ್ಸಾಹಕರ ಮತ್ತು ಪೂರಕ ಕಲಿಕಾ ವಾತಾವರಣವು ಅನಿವಾರ್ಯವಾಗಿ ಬೇಕಾಗುತ್ತದೆ. ವಿಶೇಷವಾಗಿ ಹಲವು ಬಗೆಯ ಅಡೆತಡೆಗಳನ್ನು ಎದುರಿಸುವ ಮಕ್ಕಳಿಗೆ ಅದರ ಅನಿವಾರ್ಯತೆ ತುಂಬಾ ಇದೆ. ನಾನೀಗ ಮಾತನಾಡುವ ಶಾಲೆಗಳ ಮಕ್ಕಳ ಸಂದರ್ಭಕ್ಕೂ ಇದು ಅನ್ವಯಿಸುತ್ತದೆ. ಶಾಲೆಗಳಲ್ಲಿ ಬಂಗಾಲಿ ಭಾಷೆ ಕಲಿಕಾ ಮಾಧ್ಯಮವಾಗಿರುವುದರಿಂದ, ವಲಸೆ ಬಂದ ಕುಟುಂಬಗಳಿಗೆ ಸೇರಿದ ಈ ಮಕ್ಕಳ ಕಲಿಕೆಯ ಮಟ್ಟವು ಕಡಿಮೆ ಇರುವುದಕ್ಕೆ ಸಾಮಾಜಿಕ ಮತ್ತು ಭಾಷಿಕ ಅಡೆತಡೆಗಳೇ ಕಾರಣ ಎಂಬುದು ಸ್ಪಷ್ಟವಾಗಿದೆ. ಮನೆ ಮತ್ತು ಶಾಲಾ ಭಾಷೆಯ ಮಧ್ಯದ ಭಿನ್ನತೆ ಅವರ ಕಲಿಕೆಗೆ ಬಹಳ ದೊಡ್ಡ ಕಂಟಕ ಎಂಬುದರ ಬಗ್ಗೆ ಅನುಮಾನಗಳಿಲ್ಲ. ಆದರೆ ಅದಕ್ಕಿಂತಲೂ, ಶಿಕ್ಷಕರು ಮಕ್ಕಳೊಂದಿಗೆ ಹೊಂದಿರುವ ಸಾಮಾಜಿಕ ಅಂತರವು ಸಮಸ್ಯಾತ್ಮಕವಾಗಿದೆ. ಅವರಿಗೆ ವಿದ್ಯಾರ್ಥಿಗಳ ನಿರ್ದಿಷ್ಟವಾದ ಮತ್ತು ವ್ಯಕ್ತಿಗತವಾದ ಕಲಿಕಾ ಅವಶ್ಯಕತೆಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಮಕ್ಕಳ ಅಂತಃಪ್ರೇರಣೆ ಬಹಳ ಕೆಳಮಟ್ಟದಲ್ಲಿ ಇರುವುದಕ್ಕೆ ಮೂಲಭೂತ ಕಾರಣವಾಗಿದೆ.

ತರಗತಿಯೊಳಗೆ ಶಿಕ್ಷಕರೇ ಪ್ರಧಾನ ಸೂತ್ರದಾರನಾಗಿ ಇರುವುದರಿಂದ ಅವರೇ ಇಡೀ ತರಗತಿಯ ಸ್ವರೂಪವನ್ನು ರೂಪಿಸುವ ಜವಾಬ್ದಾರಿ ಹೊಂದಿರುತ್ತಾರೆ. ಯಾವಾಗಲೂ ಶಿಕ್ಷಕರ ವ್ಯಕ್ತಿತ್ವದ ಸುತ್ತ ಮಕ್ಕಳ ಪ್ರಾಥಮಿಕ ಸಾಮಾಜೀಕರಣ ಮತ್ತು ಕಲಿಕೆಯು ಸಂಭವಿಸುತ್ತದೆ. ಆದರೆ ನಾನು ಹೇಳಿದ ಶಾಲೆಗಳಲ್ಲಿ ಇದು ಕಾಣೆಯಾಗಿತ್ತು. ಅವರ ವಾಸದ ಸ್ಥಳದ ಸುತ್ತ ನಾವು ಕೆಲವು ಸಮಯಗಳಿಂದ ಕಾರ್ಯನಿರ್ವಹಿಸುತ್ತಿದ್ದ ಕಾರಣ ನಮಗೆ ಆ ಮಕ್ಕಳ ಸಾಮಾಜಿಕ ಸಂದರ್ಭವು ಪರಿಚಿತವಾಗಿತ್ತು. ಅದು ನಗರದ ಪೋಲೀಸರ ಸಹಭಾಗಿತ್ವದಲ್ಲಿ ನಡೆಯುತ್ತಿದ್ದ ಒಂದು ಆಸಕ್ತಿದಾಯಕವಾದ ಯೋಜನೆಯಾಗಿದ್ದು, ಪೋಲೀಸ್ ಠಾಣೆಗಳ ಒಳಗೇ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ವ್ಯಂಗ್ಯ ಎಂದರೆ, ಪೋಲೀಸ್ ಠಾಣೆ ಆವರಣದ ಸುರಕ್ಷಿತ ಸ್ಥಳಗಳಲ್ಲಿ ಈ ಶಿಕ್ಷಣ ಕೇಂದ್ರಗಳು ನಡೆಯುತ್ತಿದ್ದು, ವಯಸ್ಕರು ಮತ್ತು ಸಂಬಂಧಿಸಿದ ಮಕ್ಕಳ ಮಧ್ಯೆ ಭಾವನಾತ್ಮಕ ಸಂಪರ್ಕ ಮತ್ತು ಬಾಂಧವ್ಯ ಸೃಷ್ಟಿಯಾದದ್ದರಿಂದ ಅಲ್ಲಿ ಮಕ್ಕಳಿಗೆ ಮುಕ್ತ ಮತ್ತು ನಿರ್ಭೀತಿಯ ವಾತಾವರಣವನ್ನು ಒದಗಿಸುವುದಕ್ಕೆ ಸಾಧ್ಯವಾಗಿತ್ತು. ಅಲ್ಲಿ ನಿಯೋಜಿತರಾಗಿದ್ದ ನಮ್ಮ ಸಂಸ್ಥೆಯ ಶಿಕ್ಷಕರೂ ಕೂಡಾ ಕಾಳಜಿ ವಹಿಸುವವರಾಗಿ ಪಾತ್ರ ವಹಿಸಿದ್ದರು.

### ಸುರಕ್ಷಿತ ಸ್ಥಳಗಳು

ಈ ಕೇಂದ್ರಗಳಲ್ಲಿ ಶಿಕ್ಷಕರು ವಿಶೇಷ ಕಾಳಜಿ ವಹಿಸಿ ಮಕ್ಕಳಿಗೆ ತಾವೂ ಶಾಲಾ ವ್ಯವಸ್ಥೆಯ ಜೊತೆಗೆ ಒಂದಾಗಿದ್ದೇವೆ ಎಂಬ ಭಾವನೆಯನ್ನು ತಂದುಕೊಡುತ್ತಿದ್ದರು. ಮತ್ತು ಪಾಲಕರಲ್ಲೂ ಅವರಿಗೂ ಇಲ್ಲಿ ಸ್ವಾಗತವಿದೆ ಮತ್ತು ಭಾಗವಹಿಸುವಿಕೆ ಇದೆ ಎಂಬ ಭಾವನೆಯನ್ನು ಉಂಟುಮಾಡುತ್ತಿದ್ದರು. ತಮ್ಮ ಭಾಷಿಕ ಮತ್ತು / ಅಥವಾ ಧಾರ್ಮಿಕ ಹಿನ್ನೆಲೆಗಳಿಂದಾಗಿ ಈ ಮಕ್ಕಳಲ್ಲಿ ಬಹುಸಂಖ್ಯಾತರು ಪರೋಕ್ಷ ಅಥವಾ ನೇರ ಸ್ವರೂಪದ ಸಾಮಾಜಿಕ ಪ್ರತ್ಯೇಕತೆಯನ್ನು ಎದುರಿಸುತ್ತಾರೆ. ನಗರದ ಈ ಭಾಗದಲ್ಲಿ ಅಪರಾಧ ಪ್ರಮಾಣ ಹೆಚ್ಚಿದ್ದು, ಕುಟುಂಬಗಳ ಹಿನ್ನೆಲೆಯ ಕಾರಣಕ್ಕೆ ಅವರಿಗೆ 'ಸಂಭವನೀಯ ಅಪರಾಧಿತನ'ದ (Potential criminality) ಕಳಂಕ ಅಂಟಿಕೊಂಡಿದೆ. ಆದರೆ ಇಲ್ಲಿಗೆ ಬರುವ ಮಕ್ಕಳು ಕಲಿಯುವುದರಲ್ಲಿ ಉತ್ಸಾಹಿಗಳಾಗಿದ್ದರು ಮತ್ತು ತೀರ ವಿರಳವಾಗಿ ಗೈರುಹಾಜರಾಗುತ್ತಿದ್ದರು.

ಈ ನೆರೆಹೊರೆಯಲ್ಲಿ ಮಕ್ಕಳ ಜೊತೆಗಿನ ನಮ್ಮ ಕೆಲಸದ ಮೂಲಕ, ಕಲಿಕೆಯು ಪರಿಣಾಮಕಾರಿಯಾಗಿ ಆಗುವುದಕ್ಕೆ ಆತಂಕ ರಹಿತ, ಭಾವನಾತ್ಮಕವಾಗಿ ಸುರಕ್ಷಿತವಾದ ಮತ್ತು ಒಳಗೊಳ್ಳುವ ಗುಣ ಇರುವ ಜಾಗ ಪ್ರಧಾನವಾಗಿ ಬೇಕಾಗಿದೆ ಎಂಬುದನ್ನು ನಾವು ಅರಿತುಕೊಂಡೆವು. ಅಲ್ಲಿ ಮಕ್ಕಳಿಗೆ ತಮ್ಮನ್ನು ತಾವೇ ಭಯ ಮತ್ತು ಹಿಂಜರಿಕೆಗಳಿಲ್ಲದೆ ಅಭಿವ್ಯಕ್ತಿಸುವುದು ಸಾಧ್ಯವಾಗುತ್ತದೆ. ಆ ಕಾರಣವಾಗಿ, ಇದೇ ಬಗೆಯ ಬೆಂಬಲವನ್ನು ಅಕ್ಕಪಕ್ಕದ ಸರಕಾರಿ ಪ್ರಾಥಮಿಕ ಶಾಲೆಗಳಲ್ಲೂ ಒದಗಿಸುವಂತೆ ಸರಕಾರವು ನಮ್ಮನ್ನು ಸಂಪರ್ಕಿಸಿದಾಗ, ನಾವು ನಿಜಕ್ಕೂ ಸಂತೋಷಗೊಂಡಿದ್ದೆವು.

ನಮ್ಮ ಮೊದಲ ಮಾತುಕತೆಯ ಸಂದರ್ಭ, ಅಲ್ಲಿಯ ಸನ್ನಿವೇಶಗಳನ್ನು ಅರಿತ ಶಿಕ್ಷಕರು, ಅಂತಹ ಸಂಕೀರ್ಣ ಪರಿಸ್ಥಿತಿಯನ್ನು ನಿಭಾಯಿಸಲು ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸಿದ್ದರು. ಭಾಷೆಯ ಭಿನ್ನತೆಯ ಸುಳಿಯನ್ನು ಅರಿಯದೆ ಪಠ್ಯಪುಸ್ತಕವನ್ನು ಬೋಧಿಸುವುದು ಸರಿಯಾದ ಮಾರ್ಗವಲ್ಲ ಎಂಬುದು ಅವರಿಗೆ ತಿಳಿದಿತ್ತು. ಆದರೆ ಆ ಸುಳಿಯಿಂದ ಹೊರಬರುವುದು ಹೇಗೆ ಎಂಬುದು ಅವರಿಗೆ ತಿಳಿದಿರಲಿಲ್ಲ. ಮಕ್ಕಳು

ಇರುವ ಮಟ್ಟಕ್ಕೆ ಹೋಲಿಸಿದರೆ ಆ ಪಠ್ಯಗಳು ಅವರಿಗೆ ಎಟುಕಲಾರದಂತೆ ಇವೆ ಎಂದು ಅವರು ಹೇಳಿದರು. ಆದರೆ ತಾವು, ಮಕ್ಕಳ ಕಲಿಕೆಗಿಂತ ಪಠ್ಯ ವಿಷಯಗಳನ್ನು ಪೂರ್ತಿ–ಗೊಳಿಸುವುದನ್ನೇ (Completion of syllabus) ಆದ್ಯತೆಯಾ–ಗಿರಿಸಿಕೊಂಡ ಒಂದು ವ್ಯವಸ್ಥೆಯ ಭಾಗ ಎಂಬುದನ್ನು ಅವರು ತಿಳಿದುಕೊಂಡಿದ್ದರು. ತಾವು ಚಕ್ರದ ಹಲ್ಲುಗಳಷ್ಟೇ ಹೊರತು ಅದರ ಮೇಲೆ ಹಿಡಿತ ಇರುವವರಲ್ಲ ಎಂಬುದು ಅವರಿಗೆ ಸ್ಪಷ್ಟವಾಗಿತ್ತು. ಹೀಗೆ ಶಿಕ್ಷಕರಿಗೆ ಸ್ವಾಯತ್ತತೆ ಮತ್ತು ಇಚ್ಛಾಶಕ್ತಿಯ ಕೊರತೆಉಂಟಾಗಿ, ಅದು ಮಕ್ಕಳ ಮೇಲೆ ಪ್ರತಿಫಲನವಾಗಿ, ಅವರು ತಾವು ಅಸಮರ್ಥರು ಮತ್ತು ಕಲಿಯಲಾರದವರು ಎಂಬ ಭಾವನೆಗೆ ಒಳಗಾಗುತ್ತಿದ್ದರು. ತರಗತಿಗಳು ಖಾಲಿಖಾಲಿಯಾಗಿ, ಕಳೆಗುಂದಿ ಮತ್ತು ನಿರ್ವಹಣೆ ಇಲ್ಲದೆ ಸೊರಗುತ್ತಿದ್ದವು. ಮಕ್ಕಳು ನಿರಂತರ ಗೈರು ಹಾಜರಾಗುತ್ತಿದ್ದರು ಶಿಸ್ತನ್ನು ಜಾರಿಗೆ ತರುವುದು ಅಸಾಧ್ಯವೇ ಆತ್ತು.

**ಬದಲಾವಣೆಯ ಕರೆಗಂಟೆ**

**ತರಗತಿಗಳನ್ನು ರೂಪಿಸುವುದು**

ಆತ್ಮೀಯತೆ ಮತ್ತು ಬೆಂಬಲ ನೀಡುವಂತಹ ವಾತಾವರಣವು ಕಲಿಕೆಗೆ ಬೇಕಾದ ಪೂರ್ವನಿರ್ಧರಿತ ಅಂಶವಾಗಿವೆ. ಅಂತಹ ಒಂದು ಸ್ಥಳವನ್ನು ಸೃಷ್ಟಿಸುವುದೇ ಶಿಕ್ಷಕರು ಮುನ್ನಡೆಸಲಿರುವ ಬದಲಾವಣೆಯ ಪ್ರಯಾಣದ ಆರಂಭ ಬಿಂದು ಎಂದು ನಿರ್ಧರಿಸಲಾಯಿತು. ಮೊದಲ ಹೆಜ್ಜೆಯಾಗಿ ಶಿಕ್ಷಕರು ಮತ್ತು ಮಕ್ಕಳು ಜೊತೆ ಸೇರಿ ಅಕ್ಷರಶಃ ತರಗತಿ ಕೊಠಡಿಯನ್ನು ಶುಚಿಗೊಳಿಸುವುದಾಗಿತ್ತು. ಆಮೇಲೆ ಅವರು ತರಗತಿ ಕೊಠಡಿಯ ಗೋಡೆಗಳನ್ನು ನಳನಳಿಸುವಂತೆ ಮಾಡುವುದಕ್ಕೆ ಕೆಲವು ನಕ್ಷೆ ಮತ್ತು ಭಿತ್ತಿಪತ್ರಗಳ ತಯಾರಿಗೆ ಮುಂದಾದರು. ಪ್ರತಿ ಗುಂಪಿಗೂ ಒಂದು ಕೆಲಸವನ್ನು ನಿಗದಿಪಡಿಸಲಾಯಿತು–ಒಂದು ಗುಂಪು ತರಗತಿಯ ನಿಯಮಗಳನ್ನು ರೂಪಿಸುವ ಕೆಲಸ ಮಾಡಿತು. ಇನ್ನೊಂದು ಗುಂಪು ಭಾವನೆಗಳ ಪಟ್ಟಿಯ ಕೋಷ್ಟಕ (Emotion-mapping chart) ರೂಪಿಸಿತು. ಮೂರನೆಯ ಒಂದು ಗುಂಪು ಅಂಕೆ ಸಂಖ್ಯೆಗಳ ನಕ್ಷೆ ತಯಾರಿ ನಡೆಸಿತು. ಮಕ್ಕಳು ಕಾಗದದ ಫಲಕಗಳ ಮೇಲೆ ತಮ್ಮದೇ ಚಿತ್ರಗಳನ್ನು ರಚಿಸಿದರು ಮತ್ತು ಆ ಚಿತ್ರಗಳ ಕೆಳಗೆ ತಮಗೆ ಇಷ್ಟವಾಗುವ ಮತ್ತು ಇಷ್ಟವಾಗದ ವಿಷಯಗಳ ಕುರಿತು ಪುಟ್ಟ ಟಿಪ್ಪಣಿಗಳನ್ನು ಬರೆದರು. ತಕ್ಷಣವೇ ಅವರ ತರಗತಿಗಳು ವರ್ಣಮಯವಾಗಿಯೂ ಆಕರ್ಷಕವಾಗಿಯೂ ಕಾಣತೊಡಗಿದವು: ತಮ್ಮದೇ ಕೈಗೆಲಸದ ಕೃತಿಗಳು ಗೋಡೆಗಳ ಮೇಲೆ ಇರುವುದನ್ನು ಕಂಡು ಅವರಲ್ಲಿ ಹೆಮ್ಮೆ ಮತ್ತು ನಾವೂ ಇಲ್ಲಿಗೆ ಸೇರಿದವರು ಎಂಬ ಭಾವನೆ ಮೊಳಕೆ ಒಡೆಯಿತು.

ಅಲ್ಲದೆ, ಅದೇ ಮೊದಲ ಬಾರಿಗೆ ಅವರೆಲ್ಲ ಜೊತೆಗೆ ಕುಳಿತಿದ್ದರು ಶಿಕ್ಷಕರ ಜೊತೆಗೆ ಗುಂಪುಗಳಾಗಿ ಸುತ್ತ ಕುಳಿತು ಕೆಲಸ ಮಾಡಿದ್ದರು. ನಕ್ಷೆ ಮತ್ತು ಭಿತ್ತಿಪತ್ರಗಳ ತಯಾರಿಯ ಕೆಲಸದ ಮಧ್ಯೆ ಪರಸ್ಪರ ಅನೌಪಚಾರಿಕವಾಗಿ ಮಾತುಕತೆಯಾಡಿದರು, ಶಿಕ್ಷಕರ ಜೊತೆಗೂ ಹರಟಿದರು. ಹೀಗೆ ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಶಿಕ್ಷಕರ ಜೊತೆ ಹತ್ತಿರವಾಗಿ ಇರುವ ಅವಕಾಶವು ಮಕ್ಕಳಿಗೆ ನಿರುಮ್ಮಳವಾಗುವುದಕ್ಕೆ ಮತ್ತು ಮುಕ್ತವಾಗಿರುವುದಕ್ಕೆ ಸಹಾಯ ಮಾಡಿತು. ಅವರು ಚುರುಕಾಗಿದ್ದರು, ಕ್ರಿಯಾಶೀಲವಾಗಿದ್ದರು ಮತ್ತು ಉತ್ಸುಕತೆಯಿಂದ ಇದ್ದರು. ಹಾಗಿದ್ದೂ ಆರಂಭದಲ್ಲಿ ಶಿಕ್ಷಕರು ಆತಂಕಪಟ್ಟಂತೆ ಅಲ್ಲಿ ಶಿಸ್ತಿನ ಕೊರತೆ ಉಂಟಾಗಿಲ್ಲ. ಈ ಅನುಭವದ ನಂತರ ಅವರು ಸಾಲುಗಳಲ್ಲಿ ಕೂರುವ ತಮ್ಮ ಮಾಮೂಲು ವಿಧಾನಕ್ಕೆ ಹಿಂದಿರುಗಿ, ತಮ್ಮ ಹಳೆಯ ಔಪಚಾರಿಕ ಸಂವಹನದ ಕ್ರಮಗಳನ್ನೇ ಅನುಸರಿಸಿದರು. ಆದರೆ ಈ ಸಣ್ಣ ಚಟುವಟಿಕೆ ತರಗತಿಯ ವಾತಾವರಣದಲ್ಲಿ ಒಂದು ಸೂಕ್ಷ್ಮ ಬದಲಾವಣೆಯನ್ನು ತಂದಿತ್ತು.



**ಸಂವಾದದ ಮೂಲಕ ಪರಸ್ಪರ ವಿನಿಮಯ**

ಆ ಉತ್ತಮವಾದ ಆರಂಭವನ್ನು ಮುಂದುವರೆಸಲು, ಸಂವಹನದ ಅಡೆತಡೆಗಳನ್ನು ತೊಡೆದುಹಾಕುವಂಥ ಕೆಲವು ಚಟುವಟಿಕೆಗಳನ್ನು ಪರಿಚಯಿಸುವುದು ಅಗತ್ಯವಾಗಿತ್ತು. ಶಾಲೆಗಳು ಸಾಂಪ್ರದಾಯಿ–ಕತೆಯ ಸ್ಥಳಗಳೂ ಆಗಿರುವ ಕಾರಣ, ಚಟುವಟಿಕೆಗಳು ಅವರ ದಿನನಿತ್ಯದ ಬೋಧನಾ ಪ್ರಕ್ರಿಯೆಯ ಭಾಗವಾಗಿ ಇರಬೇಕಿತ್ತು. ಮೌಖಿಕ ಭಾಷಾ ಬೆಳವಣಿಗೆ (Oral language development) ಯನ್ನು ಇದಕ್ಕೆ ಬಹಳ ಸುಲಭದ ಒಂದು ದಾರಿ ಎಂದು ನಾವು ಭಾವಿಸಿದೆವು.

ಪಠ್ಯಕ್ರಮದೊಳಗೆ ಇದರ ಪ್ರಸ್ತಾಪವಿದ್ದರೂ, ಶಾಲೆಗಳಲ್ಲಿ ಮಾತ್ರ ಶಿಕ್ಷಕರು ಉಪೇಕ್ಷಿಸಿ ಬಿಡುವ, ಬಹಳ ಮುಖ್ಯವಾದ ಒಂದು ಕ್ಷೇತ್ರ ಇದು. ವಾಕ್ಪಟುತ್ವವು (Oracy) ಸಾಕ್ಷರತೆಗೆ ಅಡಿಪಾಯ ಎಂಬುದನ್ನು ಸಾರ್ವತ್ರಿಕವಾಗಿ ಮನ್ನಿಸಿರುವಾಗಲೂ, ಪ್ರಾಥಮಿಕ ಶಾಲೆಗಳಲ್ಲಿ ಓದುವುದು ಮತ್ತು ಬರೆಯುವುದಕ್ಕೆ ಪ್ರತ್ಯೇಕ ಪ್ರಾಮುಖ್ಯತೆ ನೀಡಿ ಭಾಷೆಯ ಮಾತಿನ ರೂಪದ ಜೊತೆಗೆ ಸಂಬಂಧವೇ ಇಲ್ಲದಂತೆ ನೋಡುವುದು ಸಾಮಾನ್ಯವಾಗಿದೆ.

ಭಾಷಾ ಬೆಳವಣಿಗೆಗೆ ಸಂಭಾಷಣೆಗಳು ಕೇಂದ್ರ ಬಿಂದುವಾಗಿವೆ – ಚಿಂತನೆ ಮತ್ತು ಆಲೋಚನೆಗಳ ವಿನಿಮಯ, ಬೇರೆಯವರ ಮಾತನ್ನು ಆಲಿಸಿ ಅವರ ಭಾವನೆಗಳನ್ನು ತಿಳಿಯುವುದು ಮತ್ತು ಅವರ ಅನುಭವಗಳನ್ನು ತಿಳಿಯುವುದು– ಇವು ಕೂಡಾ ಸಾಮಾಜಿಕವಾಗಿ ಮತ್ತು ಭಾವನಾತ್ಮಕವಾಗಿ ಮನಸ್ಸನ್ನು ಸಮೃದ್ಧಗೊಳಿಸುವ ಪ್ರಕ್ರಿಯೆಗಳೇ ಆಗಿವೆ. ಮಕ್ಕಳು ಮತ್ತು ಶಿಕ್ಷಕರು ಪರಸ್ಪರ ಸಂಭಾಷಣೆಗಳ ಮೂಲಕ, ಒಬ್ಬರನ್ನೊಬ್ಬರು ಇನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಆದರೆ ಮಕ್ಕಳ ಹಿಂಜರಿಕೆಯನ್ನು ತೊಡೆದುಹಾಕುವಂತಹ ಮತ್ತು ಮಕ್ಕಳು ಕೇವಲ ಪ್ರಶ್ನೆಗೆ ಉತ್ತರಿಸುವುದನ್ನು ಮೀರಿ ನಿಜವಾಗಿಯೂ ಮುಕ್ತವಾದ ಮಾತುಕತೆ ನಡೆಸುವಂತಹ ಒಂದು ಪ್ರಾಮಾಣಿಕ ಸಂಭಾಷಣೆಯನ್ನು ಕೈಗೊಳ್ಳುವುದಕ್ಕೆ ಶಿಕ್ಷಕರು ಅಭ್ಯಾಸ ಮಾಡಬೇಕಿದೆ. ಮಾತನಾಡುವುದು ಕಲಿಕೆಯ ಬಹಳ ಮುಖ್ಯವಾದ ಒಂದು ಮಾಧ್ಯಮವಾಗಿದ್ದು, ಆದರೆ ಸಾಂಪ್ರದಾಯಿಕ ಉಪದೇಶಾತ್ಮಕ ವಿಧಾನದಲ್ಲಿ (Traditional didactic mode of teaching) ತರಗತಿಯ ಮಾತು ಶಿಕ್ಷಕರಿಂದಲೇ ನಿಯಂತ್ರಿಸಲ್ಪಡುತ್ತದೆ. ಮಕ್ಕಳಿಗೆ ಪ್ರತಿಕ್ರಿಯಿಸುವ ಅವಕಾಶವನ್ನು ಬಹಳ ವಿರಳವಾಗಿ, ಶಿಕ್ಷಕರ ಹಾಡಿಗೆ ಧ್ವನಿ ಕೊಡುವ ರೀತಿಯಲ್ಲಿ,

ಅಥವಾ ಪುನರಾವರ್ತನೆಯ ರೀತಿಯಲ್ಲಿ, ಅಥವಾ ಒಂದೇ ಪದದಲ್ಲಿ ಉತ್ತರಿಸುವ ರೀತಿಯಲ್ಲಿ ನೀಡಲಾಗುತ್ತದೆ. ಇದರಿಂದ ಮಕ್ಕಳು ತಟಸ್ಥವಾಗಿ ಕಲಿಯುವ ವಾತಾವರಣಕ್ಕೆ ಯಾಂತ್ರಿಕವಾಗಿ ಬದ್ಧರಾಗುತ್ತಾರೆ. ಅದು ಅವರ ಪ್ರೇರಣೆ ಮತ್ತು ಸಾಧನೆಯ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರುತ್ತದೆ.


**ನಿಜ ಜೀವನದ ಉದಾಹರಣೆಗಳು**

**ಪ್ರಕರಣ ಅಧ್ಯಯನ 1**

ನಾವು ಜೊತೆಯಾಗಿ ಕೆಲಸ ಮಾಡುತ್ತಿದ್ದ ನಂದಿತಾ ಎಂಬ ಓರ್ವ ಶಿಕ್ಷಕಿಯು, 3ನೇ ತರಗತಿಯ ಮಕ್ಕಳಿಗೆ ಸಂಭಾಷಣಾ ವಿಧಾನದ ತರಗತಿಯನ್ನು ನಡೆಸಲು ನಿರ್ಧರಿಸಿದಾಗ, ಪ್ರಾರಂಭದಲ್ಲಿ ಅವರ 'ಶಿಕ್ಷಕ ಧ್ವನಿ'ಯನ್ನು ಬಿಟ್ಟುಬಿಡುವುದಕ್ಕೆ ಮತ್ತು ಮಕ್ಕಳ ಜೊತೆ ಸಂಭಾಷಣೆಯ ಶೈಲಿಯಲ್ಲಿ ಮಾತುಕತೆಯಾಡುವುದಕ್ಕೆ ಕಷ್ಟಪಟ್ಟರು. ಆಗ ಅವರು ಒಂದು ಸರಳ ಚಟುವಟಿಕೆಯ ಕುರಿತು ಯೋಚಿಸಿದರು.

ನಂದಿತಾ ಕೆಲವು ಚೀಟಿಗಳನ್ನು ತಯಾರಿಸಿ, ಅದರಲ್ಲಿ ಉರುಟುಕಲ್ಲು, ಅಂಗಡಿ, ಸಿಹಿತಿನಿಸು, ಬೀದಿ ಇತ್ಯಾದಿ ಸಂಭಾಷಣೆಗಾಗಿ ಮನಸ್ಸಿಗೆ ತೋಚಿದ ಕೆಲವು ವಿಷಯಗಳನ್ನು ಬರೆದರು. ಆಮೇಲೆ ಮಕ್ಕಳನ್ನು ಜೋಡಿಗಳಾಗಿ ಮುಂದೆ ಬರುವಂತೆ ತಿಳಿಸಿ ಒಂದು ಚೀಟಿಯನ್ನು ಎತ್ತಿಕೊಳ್ಳಲು ಸೂಚಿಸಿದರು. ಜೊತೆಗಾರನ/ಳ ಜೊತೆಗೆ ಅವರು ಆ ವಿಷಯದ ಬಗ್ಗೆ ಚರ್ಚಿಸಿ, ನಂತರ ತರಗತಿಯನ್ನು ಉದ್ದೇಶಿಸಿ ಅದರ ಕುರಿತು ಮಾತನಾಡಬೇಕಿತ್ತು. ಆರಂಭದಲ್ಲಿ ತಮ್ಮ ಮಾತಿನ ವಿಧಾನವನ್ನು ಬದಲಾಯಿಸಿಕೊಳ್ಳಲು ಮಕ್ಕಳಿಗೂ ಸಮಸ್ಯೆ-ಯಾಯಿತು – ಅವರಿಗೆ ಕಸಿವಿಸಿಯಾಗಿ, ಅದೇ ಅವರ ತರಗತಿಯೊಳಗೆ ಬಳಸುವ ಔಪಚಾರಿಕವಾದ ಭಾಷೆಯಲ್ಲಿಯೇ ಮಾತಾಡಿದರು. ಆದರೆ ಯಾವುದೋ ಒಂದು ಮಗು ಈ ವಿನ್ಯಾಸವನ್ನು ಒಡೆದು, ತನ್ನ ಮಾವನಿಗೆ ಒಂದು ಆಲೂ ಚಾಟ್ ಶಾಪಿದೆ ಎಂದ ತಕ್ಷಣ, ಅಡೆತಡೆಗಳು ಮುರಿದು ಬಿದ್ದವು. ಮತ್ತು ಪ್ರತಿಯೊಬ್ಬರೂ ಸಹಜವಾಗಿ ಸ್ಪಂದಿಸುವುದಕ್ಕೂ, ಸಂಭಾಷಿಸುವುದಕ್ಕೂ ತೊಡಗಿದರು.

ತರಗತಿ ಕೊಠಡಿಯ ಒಳಗಿನ ವಾತಾವರಣವು ಸುಲಭಗ್ರಾಹ್ಯವಾಗಿ ಬದಲಾಯಿತು ಮತ್ತು ಮಕ್ಕಳು ಚಟುವಟಿಕೆಯ ಒಳಗೆ ಸಹಜವಾಗಿ ತಲ್ಲೀನರಾದರು. ಆ ಚಟುವಟಿಕೆಯನ್ನು ಮುಗಿಸುವುದು ಅವರಿಗೆ ಬೇಕಾಗಿರಲಿಲ್ಲ. ಮಾಹಿತಿಯ ಹರಿವು ಏಕಮುಖವಾಗಿರಲಿಲ್ಲ. ಅದು ಮಕ್ಕಳ ಕಡೆಯಿಂದಲೂ, ಅವರ ಜೀವಂತ ಅನುಭವಗಳನ್ನು ಆಧರಿಸಿ, ಹರಿದು ಬಂದಿತು. ನಂತರ, ಈ ಸರಳ ಚಟುವಟಿಕೆಯಿಂದ ಮಕ್ಕಳ ಖಾಸಗಿ ಬದುಕಿನ ಕುರಿತು ಬಹಳ ತಿಳಿದುಕೊಂಡೆ ಎಂದು ನಂದಿತಾ ಹೇಳಿದರು. ಅವರೆಗೆ ಮಕ್ಕಳೊಂದಿಗೆ ತಿಂಗಳುಗಟ್ಟಲೆ ಕಳೆದಿದ್ದರೂ ಈ ವಿಷಯಗಳು ಒಂದೂ ಅವರಿಗೆ ತಿಳಿದಿರಲಿಲ್ಲ. ಹೀಗೆ, ಪ್ರಾಮಾಣಿಕ ಮಾತು ಎಂಬುದು ಭಾಷೆಯ ಬೆಳವಣಿಗೆಗೆ ಮಾತ್ರವಲ್ಲದೆ, ಶಿಕ್ಷಕರಿಗೆ ಮಕ್ಕಳ ಆಸಕ್ತಿಗಳನ್ನುಮತ್ತು ಸಾಮಾಜಿಕ ಸಂದರ್ಭಗಳನ್ನು ಮತ್ತಷ್ಟು ಉತ್ತಮವಾಗಿ ಅರ್ಥೈಸುವುದಕ್ಕೆ ಕೂಡಾ ಬಹಳ ಮುಖ್ಯವಾದ ಸಾಧನವಾಗಿದೆ.

**ಪ್ರಕರಣ ಅಧ್ಯಯನ 2**

ಓದುವುದು ಬರೆಯುವುದರ ಮಹತ್ವವನ್ನು ನಿರ್ಲಕ್ಷಿಸುವುದು ಅಸಾಧ್ಯವಾದ ಕಾರಣ, ನಂದಿತಾ ಅವರು ಬರವಣಿಗೆಗೆ ಸಂಬಂಧಿಸಿ ಭಿನ್ನವಾದ ಒಂದು ವಿಧಾನವನ್ನು ಪ್ರಯೋಗಿಸುವುದಕ್ಕೆ ನಿರ್ಧರಿಸಿದರು: ಮಕ್ಕಳು ತಾವು ಬರೆಯುವ ರೇಖಾಚಿತ್ರಗಳ ವಿಸ್ತರಣೆಯಾಗಿ ವಸ್ತು ವಿಷಯಗಳ ಕುರಿತಾಗಿ ಬರೆಯುವಂತೆ ಮಕ್ಕಳನ್ನು ಪ್ರೇರೇಪಿಸುವ ವಿಧಾನ ಅದು. ಮೊದಲಿಗೆ ಅವರ ಮನಸ್ಸಿಗೆ ಬರುವ ವಿಷಯವನ್ನು ಚಿತ್ರಿಸುವಂತೆ ಹೇಳಲಾಗುತ್ತಿತ್ತು. ನಂತರ ಚಿತ್ರಗಳನ್ನು ಬರೆದು ಮುಗಿಸಿದ ಮೇಲೆ, ಆಕೆ ಅವರನ್ನು ತಮ್ಮ ಚಿತ್ರಗಳ ಬಗ್ಗೆ ಮಾತನಾಡುವಂತೆ ಕೇಳುತ್ತಿದ್ದರು. ಅವರು ಆ ವಸ್ತುವಿಷಯವನ್ನು ಯಾಕೆ ಆಯ್ಕೆ ಮಾಡಿದಿರಿ ಎಂದು ಕೇಳುತ್ತಿದ್ದರು. ಈ ಪ್ರಶ್ನೆ ಮಕ್ಕಳನ್ನು ಯೋಚನೆಗೆ ಹಚ್ಚುತ್ತಿತ್ತು. ಈ ಪ್ರಕ್ರಿಯೆಯನ್ನು ಅವರು ಪ್ರಶ್ನೆಗಳನ್ನು ಕೇಳುತ್ತಾ ಮುಂದಕ್ಕೊಯ್ಯುತ್ತಿದ್ದರು.

ಆ ನಂತರ, ಆಕೆ ನೀವು ಚರ್ಚಿಸಿದ ವಿಷಯಗಳು ಏನೇ ಇದ್ದರೂ ಬರೆದುಬಿಡಿ ಎಂದು ಅವರನ್ನು ಕೇಳಿದರು. ಆದರೆ ಬಹುತೇಕ ಮಕ್ಕಳು ಒಂದು ಮನೆ, ಅದರ ಹಿಂಭಾಗಕ್ಕೆ ಪರ್ವತ ಶ್ರೇಣಿ ಮತ್ತು ಆಕಾಶದಲ್ಲಿ ಸೂರ್ಯ ಹೀಗೆ ಮಾಮೂಲಾದ ವಿಷಯಗಳನ್ನೇ ಚಿತ್ರಿಸುತ್ತಿದ್ದು, ರೂಢಿಯ ಚೌಕಟ್ಟಿನಿಂದ ಮುರಿಯುವುದು ಸಾಹಸದ ಕೆಲಸವೇ ಆಗಿತ್ತು. ಆದರೆ ಕೆಲವರು ಸಹಜತೆಯನ್ನು ಪ್ರದರ್ಶಿಸಿದರು. ಜಲಪಾತದ ಚಿತ್ರವನ್ನು ಬರೆದಿದ್ದ ಒಂದು ಮಗು, ಶಿಕ್ಷಕಿಯ ಹತ್ತಿರ ಬಂದು, ತಂದೆ ಹೇಗೆ ಅವಳನ್ನು ಜಲಪಾತ ನೋಡುವುದಕ್ಕೆ ಕರೆದುಕೊಂಡು ಹೋಗಿದ್ದ ಎಂದು ಹೇಳಿತು. ಗೂಬೆಯ ಚಿತ್ರವನ್ನು ಬರೆದಿದ್ದ ಇನ್ನೊಂದು ಮಗು ಗೂಬೆಯೇ ಎಲ್ಲಕ್ಕಿಂತ ಸುಂದರವಾದ ಹಕ್ಕಿ ಎಂದು ಶಿಕ್ಷಕಿಯ ಬಳಿ ಹೇಳಿತು. ಮತ್ತೊಂದು ಮಗು ಒಬ್ಬ ವ್ಯಕ್ತಿ ಹಸುವೊಂದನ್ನು ಎಳೆದೊಯ್ಯುವ ಚಿತ್ರ ಬರೆದಿತ್ತು. ಆ ದೃಶ್ಯವನ್ನು ತನ್ನ ಮನೆಯ ಬಳಿ ನೋಡಿದ್ದಾಗಿ ಮಗು ಹೇಳಿತ್ತು.

ಎಲ್ಲಾ ಮಕ್ಕಳೂ ಶಾಲೆಯ ಭಾಷೆಯ ವಿಷಯದಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದರು. ತಾನು ಕೈಗೊಂಡ ಸರಳವಾದ ಚಟುವಟಿಕೆ ಹೇಗೆ ಎಷ್ಟೊಂದು ಭಾಷೆಯನ್ನು ಉತ್ಪಾದಿಸಿತು ಮತ್ತು ಆ ಎಲ್ಲಾ ಮಕ್ಕಳಿಗೂ ತಮ್ಮ ಭಯ ಮತ್ತು ಹಿಂಜರಿಕೆಯನ್ನು ತೊರೆಯಲು ಪ್ರೇರೇಪಿಸಿ ಬರವಣಿಗೆಯಲ್ಲಿ ತೊಡಗುವುದಕ್ಕೆ ಸ್ಫೂರ್ತಿ ಕೊಟ್ಟಿತು ಎಂದು ನಂದಿತಾರಿಗೆ ಆಶ್ಚರ್ಯವಾಯಿತು. ವಿಚಾರಗಳು ಅವರ ಒಳ ಮನಸ್ಸಿನ ಭಾವನೆ ಮತ್ತು ಅನುಭವಗಳೇ ಆಗಿದ್ದ ಕಾರಣ ಅದರ ಜೊತೆ ಸಂಬಂಧ ಏರ್ಪಟ್ಟು, ಬರವಣಿಗೆಯಲ್ಲಿ ತೊಡಗುವುದಕ್ಕೆ ಸಾಧ್ಯವಾಯಿತು.

**ಇಂಗ್ಲಿಷ್ ಕಲಿಕೆಯ ಭಯವನ್ನು ಮೀರುವುದು**

ಇಂಗ್ಲಿಷನ್ನು ಹೇಳಿಕೊಡುವುದು, ವಿಶೇಷವಾಗಿ ಇಂತಹ ಮಕ್ಕಳಿಗೆ ಹೇಗೆ ಎಂಬುವುದು ಶಿಕ್ಷಕರಿಗೆ ಬಹಳ ಸವಾಲಾಗಿ ಕಂಡ ಇನ್ನೊಂದು ಕ್ಷೇತ್ರವಾಗಿತ್ತು. ಭಾಷೆಯನ್ನು ಬಳಸುವುದರಲ್ಲಿ ಶಿಕ್ಷಕರ ಆತ್ಮವಿಶ್ವಾಸದ ಕೊರತೆ, ಜೊತೆಗೆ ಮಕ್ಕಳಿಗೆ ಇಂಗ್ಲಿಷ್ ಭಾಷೆಗೆ ತೆರೆದುಕೊಂಡ ಪ್ರಾಥಮಿಕ ಅನುಭವವೂ ಇಲ್ಲದಿರುವುದು, ಆ ಕಾರಣವಾಗಿ ಪಠ್ಯದ ಜೊತೆಗೆ ತೊಡಗಿಕೊಳ್ಳುವುದು ಸವಾಲಾಗಿತ್ತು. ಪಠ್ಯವೂ ಆ ಮಕ್ಕಳ ಸಾಮರ್ಥ್ಯಕ್ಕಿಂತ ಬಹಳವೇ ಮೇಲು-ಮಟ್ಟದಲ್ಲಿರುವುದು ಒಟ್ಟಾರೆಯಾಗಿ ಕ್ಲಿಷ್ಟತೆಯನ್ನು ಹೆಚ್ಚಿಸಿತ್ತು. ಈ ಬಗೆಯ ಅಂತರಗಳ ಕಾರಣವಾಗಿ, ಇಂಗ್ಲಿಷ್ ಕಲಿಯಬೇಕೆಂಬ ಬಯಕೆ ಇದ್ದಾಗಲೂ, ಅದು ಅವರ ಮನೋಭಿಲಾಷೆಗಳ ಪ್ರತೀಕವಾದ ಭಾಷೆಯೇ ಆಗಿದ್ದಾಗಲೂ, ಮಕ್ಕಳ ಮನಸ್ಸಿನಲ್ಲಿ ಇಂಗ್ಲಿಷ್ ಕುರಿತು ಭಯ ಹುಟ್ಟಿಕೊಂಡಿತ್ತು.

ಈ ಭಯವನ್ನು ಹೋಗಲಾಡಿಸುವುದಕ್ಕೆ, ಸಂಗೀತ ಮತ್ತು ಹಾಡುಗಳು ಒಂದು ತಂತ್ರವಾಗಿ ಪರಿಣಾಮ ಬೀರಬಹುದು ಎಂದು ನಾವು ಭಾವಿಸಿದೆವು. ಸಂಗೀತಕ್ಕೆ ಭಾಷೆಗಳ ಹಂಗಿಲ್ಲದ ಕಾರಣ ಅದು, ಒಂದು ಹೊಸ ಭಾಷೆಯನ್ನು ಕಲಿಸುವುದಕ್ಕೆ ಮತ್ತು ಕಲಿಯುವುದಕ್ಕೆ ಆನಂದದಾಯಕವಾದ ಒಂದು ದಾರಿಯಾಗಿದೆ. ಇಂಗ್ಲಿಷ್‌ನ ಅಭಿನಯ ಗೀತೆಗಳು, ಉದಾಹರಣೆಗೆ, 'When you are happy and you know it, clap your hands' ಅಥವಾ 'In the morning, in the morning, I brush my teeth everyday', ಹಾವಭಾವಯುಕ್ತವಾಗಿ ಹಾಡಿದಾಗ ಸುರಕ್ಷಿತತೆಯ, ಆತ್ಮೀಯತೆಯ ಮತ್ತು ಆಹ್ಲಾದಕರ ಸಾಂಗತ್ಯದ ವಾತಾವರಣವನ್ನು ಸೃಷ್ಟಿಸುವುದಕ್ಕೆ ನೆರವಾಗುತ್ತವೆ. ಶಿಶುಗೀತೆಗಳನ್ನು ಹಾಡುವಾಗ ಸಂಪೂರ್ಣ ದೈಹಿಕ ಪ್ರತಿಸ್ಪಂದನೆ (Total Physical Response - TPR) ತಂತ್ರದ ಬಳಕೆಯು ಮಕ್ಕಳಿಗೆ ಪ್ರಜ್ಞಾಪೂರ್ವಕ ಪ್ರಯತ್ನಗಳಿಲ್ಲದೆ ಹೊಸ ಪದಗಳನ್ನೂ ಮತ್ತು ಕೆಲವು ವಿಧದ ಭಾಷಾ ರಚನೆಗಳನ್ನೂ ಕಲಿಯುವುದಕ್ಕೆ ಸಹಾಯಮಾಡಿತು. ಮಕ್ಕಳಿಗೆ ದೈಹಿಕ ಕ್ರಿಯೆಗಳಿಂದಲೇ ಅರ್ಥವನ್ನು ಊಹಿಸಲಿಕ್ಕೆ ಸಾಧ್ಯವಾದ ಕಾರಣ ಯಾವುದೇ ತರ್ಜುಮೆ ಅಥವಾ ವಿವರಣೆ ಬೇಕಾಗಲಿಲ್ಲ. ಅದೇ ರೀತಿ ಹೇಳಿದ ಸೂಚನೆಗಳನ್ನೂ ಸುಲಭವಾಗಿ ಸಂಬಂಧೀಕರಿಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ತಮ್ಮ ವಿದ್ಯಾರ್ಥಿಗಳು ಕಲಿಸದಿದ್ದರೂ, ಮಿಂಚಿನಂತೆ ಎಷ್ಟೊಂದು ಇಂಗ್ಲಿಷ್ ಪದಗಳನ್ನು ಸುಸ್ಪಷ್ಟವಾಗಿ ತಿಳಿದುಕೊಂಡರು ಎಂದು ಶಿಕ್ಷಕರು ಖುಷಿಪಟ್ಟರು.

ಹೊಸ ಕಲಿಕೆ ಯಾವುದೇ ಇದ್ದರೂ ಅಂತರ್ಗತವಾಗುವುದಕ್ಕೆ, ಪುನರ್ಮನನ ಬಹಳ ಅಗತ್ಯವಾಗಿದೆ. ಹಾಗಾಗಿ ಟಿಪಿಆರ್ ಅನ್ನು ಅನುಸರಿಸಿ ಕೆಲವು ಆಟಗಳು ಮತ್ತು ಸಂರಚಿತ ಸಂಭಾಷಣೆಗಳ ತರಗತಿಗಳನ್ನು ಕೈಗೊಳ್ಳಲಾಗುತ್ತಿತ್ತು. ಆಗ ಈ ಹೊಸ ಪದಗಳು ಹಾಗೂ ಭಾಷಾ ರಚನೆಗಳನ್ನು ಬಳಸಲಾಗುತ್ತಿತ್ತು. ಉದಾಹರಣೆಗೆ, ಸೈಮನ್ ಹೇಳುತ್ತಾನೆ (Simon Says) ಆಟದಲ್ಲಿ, 'ಚಪ್ಪಾಳೆ ತಟ್ಟಿ, ಕಾಲುಗಳನ್ನು ಬಡಿಯಿರಿ, ಕಾಲುಗಳನ್ನು ಅಲುಗಾಡಿಸಿ'ಯಂತಹ (Clap your hands, stamp your feet, shake your leg) ಹೊಸ ಪದಗಳ ವಾಕ್ಯ ಭಾಗಗಳನ್ನು ಬಳಸಲಾಯಿತು. ಸಂಭಾಷಣೆಗಾಗಿ, 'ಮುಂಜಾನೆ ನೀನು ಏನು ಮಾಡುತ್ತೀಯಾ?' ಎಂಬಂತಹ ರಚನೆಗಳನ್ನು ಬಳಸಲಾಯಿತು. ಆಗ ಮಕ್ಕಳಿಗೆ ತಾವು ಕಲಿತ ಹಾಡಿನ ವಾಕ್ಯ ಭಾಗಗಳನ್ನು, ಉದಾಹರಣೆಗೆ, ನಾನು ಹಲ್ಲು ಉಜ್ಜುವೆ, ನಾನು ತಲೆ ಬಾಚುವೆ, ನಾನು ಸ್ನಾನ ಮಾಡುವೆ ('I brush my teeth, I comb my hair, I take my bath) ಮುಂತಾದುವನ್ನು ಸುಲಭವಾಗಿ ಬಳಸಲು ಸಾಧ್ಯವಾಯಿತು. ಶಿಶುಗೀತೆಗಳ ಪುನರಾವರ್ತನೆಯ ವಿನ್ಯಾಸದಲ್ಲಿ ಅದರ ಸಂರಚನೆಗೆ ಧಕ್ಕೆಯಾಗದಂತೆ ಪ್ರತಿಯೊಂದು ಸಾಲಿನಲ್ಲೂ ಕೆಲವು ಹೊಸ ಪದಗಳನ್ನು ಪರಿಚಯಿಸಲಾಯಿತು. ಇದು ಮಕ್ಕಳಿಗೆ ಭಾಷೆಯನ್ನು ಹಿಂಜರಿಕೆ ಇಲ್ಲದೆ ಆತ್ಮವಿಶ್ವಾಸದಿಂದ ಬಳಸುವುದನ್ನು ಸುಲಲಿತಗೊಳಿಸಿತು. ಪುನರಾವರ್ತಿತ ಸಾಲುಗಳ ಶಿಶುಗೀತೆಗಳು ಮಕ್ಕಳಿಗೆ ಅವರ ಭಾಷೆಯ ಬಗೆಗಿನ ಹಿಂಜರಿಕೆಗಳನ್ನು ಮೆಟ್ಟಿನಿಲ್ಲುವುದಕ್ಕೆ ಹೇಗೆ ಸಹಾಯ ಮಾಡಿತು ಎಂಬುದನ್ನು ಶಿಕ್ಷಕರು ಕಂಡುಕೊಂಡರು. ಮಕ್ಕಳು ನೋಡನೋಡುತ್ತಾ ದೃಶ್ಯ ಪದಗಳ (Sight vocabulary) ಬೆಳವಣಿಗೆಗೆ ಕೆಲವು ಮುಖ್ಯ ಪದಗಳನ್ನು 'ಪದ ಗೋಡೆ'ಯ (Word wall) ಮೇಲೆ ಬರೆಯಲಾಯಿತು. (Hands, feet, teeth, hair etc) ಶಿಶುಗೀತೆಗಳು ಮತ್ತು ಆಟಗಳು ಮಕ್ಕಳಿಗೆ ಇಂಗ್ಲಿಷ್ ಭಾಷೆಯ ಧ್ವನಿಗಳ ಜೊತೆಗೆ, ಪದಗಳನ್ನು ಉಚ್ಚರಿಸುವ ಕ್ರಮಗಳಿಗೆ ಪರಿಚಿತರಾಗುವುದಕ್ಕೂ ಸಹಾಯ ಮಾಡಿದವು. ಇದು ಮುಂದಿನ ಹಂತಕ್ಕೆ ಉದಾಹರಣೆಗೆ ಅಕ್ಷರ ಮತ್ತು ಧ್ವನಿಯ ಸಂಬಂಧ (Letter-sound connections) ಇತ್ಯಾದಿ ವಿಚಾರದತ್ತ ಹೋಗುವುದಕ್ಕೆ ಉತ್ತಮ ಸಿದ್ಧತೆಯಾಯಿತು.

ಹೊಸ ಪದಗಳ ಕಲಿಕೆ, ಹೊಸ ವಾಕ್ಯ ರಚನೆಗಳ ಕಲಿಕೆ ಹಾಗೂ ಅಕ್ಷರ ಮತ್ತು ಧ್ವನಿಯ ಸಂಬಂಧದ ಕಲಿಕೆ– ಹೀಗೆ ಒಂದು ಭಾಷೆಯನ್ನು ಕಲಿಯುವ ಎಲ್ಲಾ ಮೂರು ಪ್ರಮುಖ ಅಂಶಗಳಲ್ಲೂ ಕೆಲವು ಆನಂದದಾಯಕ ವಿಧಾನಗಳ ಮೂಲಕ ಮಕ್ಕಳು ತೊಡಗಿಕೊಳ್ಳುವುದಕ್ಕೂ ಸಾಧ್ಯವಾಯಿತು. ಭಯ ಮತ್ತು ಆತಂಕಗಳ ನಿವಾರಣೆಯು ಪೂರಕವಾದ ಕಲಿಕಾ ಎಚ್ಚರದ ಸೃಷ್ಟಿಗೂ ನೆರವಾಯಿತು.

**ಕಲಿಕೆಯ ಕಡೆಗಿನ ಹೆಜ್ಜೆಗಳು**

ಇದು ಈಗಷ್ಟೇ ಪ್ರಾರಂಭವಾದ ಪ್ರಯತ್ನವೊಂದರ ಒಂದು ವಿವರಣಾತ್ಮಕ ಉದಾಹರಣೆಯಾಗಿದೆ. ಕಲಿಕೆಯನ್ನು ಮಕ್ಕಳ ಬದುಕಿಗೆ ಜೋಡಿಸಿದರೆ, ಸಹಾನುಭೂತಿಯಿಂದ, ಅರ್ಥೈಸುವಿಕೆ–ಯೊಂದಿಗೆ ಪ್ರಸ್ತುತಿಗೊಳಿಸಿದರೆ ಮತ್ತು ಈ ಪ್ರಕ್ರಿಯೆಯಲ್ಲಿ ಶಿಕ್ಷಕರು ಸಂಪೂರ್ಣವಾಗಿ ತೊಡಗಿಕೊಂಡರೆ, ಅವರೆಲ್ಲರೂ ಕಲಿಯುವುದು ಸಾಧ್ಯವಿದೆ ಎಂಬ ತತ್ವಗಳ ಮೇಲೆ ಇದರ ವಿನ್ಯಾಸವು ರೂಪುಗೊಂಡಿದೆ.

ದೇಶದ ವಿವಿಧ ಭೌಗೋಳಿಕ ಪ್ರದೇಶಗಳಲ್ಲಿ ಅಲಕ್ಷಿತ ಮಕ್ಕಳ ಕುರಿತ ಕಾರ್ಯನಿರ್ವಹಣೆ ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಕಳೆದ ಮೂವತ್ತು ವರ್ಷಗಳಿಂದ ನಾವು ಪಡೆದ ಕಾರ್ಯಾನುಭವಗಳಿಂದ– ಪೂರಕ ಕಲಿಕಾ ಕೇಂದ್ರಗಳು ಅಥವಾ ಸಮುದಾಯ ಆಧಾರಿತ ಕಲಿಕಾ ಶಿಬಿರಗಳ ಮೂಲಕ ಅಥವಾ ಸರಕಾರಿ ಶಾಲೆಗಳ ಔಪಚಾರಿಕ ತರಗತಿ ಸಂರಚನೆಗಳ ಒಳಗಿನ ಅನುಭವಗಳಿಂದ – ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಬದಲಾವಣೆಗಳನ್ನು ಉಂಟುಮಾಡುವಂತಹ ಬೌದ್ಧಿಕ ತಂತ್ರಗಳನ್ನು ಬಳಸಿಕೊಂಡಿದ್ದೇವೆ.

**ಇದರ ವಿಶಿಷ್ಟ ಲಕ್ಷಣಗಳು ಈ ಮುಂದಿನಂತೆ ಇವೆ:**

- ಭಾಷಾ ಬೆಳವಣಿಗೆ ಮತ್ತು ಉನ್ನತ ಮಟ್ಟದ ಬೌದ್ಧಿಕ ಕೌಶಲಗಳು, ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ಒಂದು ಮುಖ್ಯ ಸಾಧನವಾಗಿ ತರಗತಿಯ ಸಂವಾದವನ್ನು ಉತ್ತೇಜಿಸುವುದು.
- ಶಿಕ್ಷಕರು ಮತ್ತು ಮಕ್ಕಳು ಜೊತೆಗೂಡಿ ತಯಾರಿಸಿದ ವಸ್ತು ಮತ್ತು ಪರಿಕರಗಳನ್ನು ಪ್ರದರ್ಶಿಸುವ ಮೂಲಕ ಸ್ವಂತಿಕೆಯನ್ನು ಬೆಳೆಸುವುದು ಮತ್ತು ಬೆಚ್ಚಗಿನ ಪೂರಕ ವಾತಾವರಣವನ್ನು ಸೃಷ್ಟಿಸುವುದು.
- ವಿವಿಧ ಇಂದ್ರಿಯ ಮೂಲದ ಕಲಿಕೆಗಳನ್ನು ಸಾಧ್ಯವಾಗಿಸಲು ಸಂಗೀತ, ಆಟಗಳು, ಕಥೆ ಮತ್ತು ಶಿಶುಗೀತೆಗಳನ್ನು ಪರಿಚಯಿಸುವುದು.
- ಈ ಚಟುವಟಿಕೆಗಳು ನಿರೀಕ್ಷಿತ ಕಲಿಕಾ ಫಲಗಳನ್ನು ಸಾಧಿಸುವುದಕ್ಕೆ ಸಹಾಯ ಮಾಡುತ್ತವೆ. ಜೊತೆಗೆ ಇವು ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಇಬ್ಬರಿಗೂ ಸಂಪೂರ್ಣ ಸಂತೋಷವನ್ನೂ ಕೊಡುತ್ತದೆ. ಅವು ಭಯ ಮತ್ತು

ಆತಂಕವನ್ನು ಹೋಗಲಾಡಿಸುವುದಕ್ಕೂ ಸಹಾಯ ಮಾಡುತ್ತವೆ. ಜೊತೆಗೆ ವಿದ್ಯಾರ್ಥಿಗಳಲ್ಲಿ ಕಲಿಕೆಯ ಎಚ್ಚರವನ್ನೂ ಉಂಟುಮಾಡುತ್ತವೆ. ಒಂದು, ವಿಶಾಲ ಯೋಜನೆಯೊಳಗಿನ ಈ ಸರಳವಾದ ಪುಟ್ಟ ಹೆಜ್ಜೆಗಳು ಮಕ್ಕಳಲ್ಲಿ ಮತ್ತು ಶಿಕ್ಷಕರಲ್ಲಿ ಬಹಳ ಪ್ರಮುಖವಾದ ಎರಡು ಪರಿಣಾಮಗಳನ್ನು ಉಂಟುಮಾಡಿವೆ. ಮೊದಲನೆಯದಾಗಿ, ಪಠ್ಯಪುಸ್ತಕಗಳು ಇಲ್ಲದೆಯೂ ಅಪೇಕ್ಷಿತ ಕಲಿಕಾ ಫಲಿತಾಂಶವವನ್ನು ಪಡೆಯಲು ಸಾಧ್ಯ ಎಂಬುದನ್ನು ಶಿಕ್ಷಕರು ಅರಿತುಕೊಂಡರು. ಮಕ್ಕಳು ಸಾಧಿಸಿದ ಕೆಲವು ಕಲಿಕಾ ಫಲಗಳನ್ನು ಗಮನಿಸಿದಾಗ ಮತ್ತು ಅವರು ಆಗಷ್ಟೇ ಪ್ರಯತ್ನಿಸಿದ ಕಲಿಕಾ ಪ್ರಕ್ರಿಯೆಗಳ ಜೊತೆಗೆ ಪಟ್ಟಿಮಾಡಿದಾಗ, ಇದು ಅವರಲ್ಲಿ ಆಶ್ಚರ್ಯವನ್ನು ಉಂಟುಮಾಡಿತು. ಎರಡನೆಯದಾಗಿ, ಹೆಚ್ಚು ಮುಖ್ಯವಾದದ್ದು, ಅಂತಹ ಚಟುವಟಿಕೆಗಳು ಅವರ ತರಗತಿಯ ವಾತಾವರಣದಲ್ಲಿ ಉಂಟುಮಾಡಿದ ನಿಶ್ಚಿತವಾದ ಭಾವನಾತ್ಮಕ ಬದಲಾವಣೆ. ಇದೊಂದು ಸಣ್ಣ ಪ್ರಾರಂಭ ಎಂಬ ಬಗೆಗೆ ಅನುಮಾನವಿಲ್ಲ. ಎಲ್ಲಿಯವರೆಗೆ ವಿಶಾಲವಾದ ವ್ಯವಸ್ಥೆಯು ಬದಲಾಗದೆ ಉಳಿಯುವುದೋ ಅಲ್ಲಿಯವರೆಗೆ ನಂದಿತಾರಂತಹ ಶಿಕ್ಷಕರು ಸಾಗಬೇಕಾದ ಹಾದಿ ಸುದೀರ್ಘವಾದುದೇ ಆಗಿರುತ್ತದೆ. ಆದರೆ ಸಾವಿರ ಮೈಲಿಗಳ ಪ್ರಯಾಣ ಒಂದು ಹೆಜ್ಜೆಯಿಂದ ಆರಂಭವಾಗಿರುತ್ತದೆ. ನಂದಿತಾ ಅವರು ಈಗಾಗಲೇ ಇರಿಸಿರುವ ಹೆಜ್ಜೆಯಂತೆ.



**ಶುಭ್ರಾ ಚಟರ್ಜಿ** ಅವರು 1986ರಿಂದಲೇ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರತರಾಗಿದ್ದಾರೆ. ಅವರು ಶಿಕ್ಷಕಿಯಾಗಿ, ಪಠ್ಯಕ್ರಮ ಅಭಿವೃದ್ಧಿಪಡಿಸುವವರಾಗಿ, ಪೂರ್ವ ಪ್ರಾಥಮಿಕ ಮಕ್ಕಳ ಶಿಕ್ಷಣ ಪರಿಣಿತರಾಗಿ, ಶಿಕ್ಷಕರ ಶಿಕ್ಷಕರಾಗಿ ಮತ್ತು ಶಿಕ್ಷಕರ ತಯಾರಿ ಕಾರ್ಯಕ್ರಮಗಳ ವಿನ್ಯಾಸಗಾರರಾಗಿ ಕೆಲಸ ಮಾಡಿದ್ದಾರೆ. ಅವರು ವಿವಿಧ ಸಾಮಾಜಿಕ ಆರ್ಥಿಕ ಪರಿಸರಗಳಲ್ಲಿ ಕೆಲಸ ಮಾಡಿದ್ದು, ದೇಶಾದ್ಯಂತ ಶಿಕ್ಷಣದ ಗುಣಾತ್ಮಕತೆ ಮತ್ತು ಸಮತೆಯ ಕುರಿತು ಕ್ರಿಯಾಶೀಲವಾಗಿರುವ ಸಂಪನ್ಮೂಲ ಸಂಸ್ಥೆ 'ವಿಕ್ರಮಶಿಲಾ'ದ ಸ್ಥಾಪಕ ನಿರ್ದೇಶಕಿಯಾಗಿದ್ದಾರೆ. ಈ ಸಂಘಟನೆಯು ಗ್ರಾಮೀಣ ಭಾಗಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷರಿಗೆ ಬೇಕಾದ ಬೆಂಬಲದ ಜೊತೆಗೆ ಮಕ್ಕಳಿಗೂ ಸೇವೆಯನ್ನು ಒದಗಿಸುವ ಮೂಲಕ ಕಾರ್ಯವನ್ನು ಆರಂಭಿಸಿದ್ದು, ಈಗ ಅದು ಭಾರತದ ಹಲವು ರಾಜ್ಯಗಳಲ್ಲಿ K-10 Spectrumನಡಿ ಕೆಲಸ ಮಾಡುತ್ತಿದೆ. ಇತ್ತೀಚೆಗೆ ಶುಭ್ರಾ ಚಟರ್ಜಿಯವರು ಆರಂಭಿಕ ಬಾಲ್ಯಕಾಲದ ಶಿಕ್ಷಣ (ECE) ಕುರಿತ ಪಠ್ಯಕ್ರಮವನ್ನು ಪುನರ್ ವಿನ್ಯಾಸಗೊಳಿಸುವುದಕ್ಕೆ ಪಶ್ಚಿಮ ಬಂಗಾಳ, ಜಮ್ಮು-ಕಾಶ್ಮೀರ, ಉತ್ತರ ಪ್ರದೇಶ ಮತ್ತು ಅಸ್ಸಾಂನ ಸಮಗ್ರ ಶಿಶು ಅಭಿವೃದ್ಧಿ ಸೇವಾ ಇಲಾಖೆಗೆ (ICDS system) ತಾಂತ್ರಿಕ ಪರಿಣತಿಯನ್ನು ಒದಗಿಸಿದ್ದಾರೆ. 'ಆರಂಭಿಕ ವರ್ಷಗಳಲ್ಲಿ ಭಾಷಾ ಕಲಿಕೆ'ಯು ಅವರ ನಿರಂತರ ಆಸಕ್ತಿಯ ಕ್ಷೇತ್ರವಾಗಿದೆ. ಅವರನ್ನು ಸಂಪರ್ಕಿಸುವ ಮೇಲ್ ಐಡಿ:
shubhra.chatterji@vikramshila.org

ಅನುವಾದ: **ದೇವಿಕ ಧರ್ಮಿಷ್ಟೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**